2021 ಚಂದನವನ

# ಮಬ್ಬು ತಬ್ಬಿಬ್ಬು

■ ಪದ್ಮನಾಭ ಭಟ್

ಚಿತ್ರರಂಗಕ್ಕೆ ಕಾಯಿಲೆಗಳು ಅಂಟಿಕೊಳ್ಳತೊಡಗಿದ್ದು ನಿನ್ನೆ ಮೊನ್ನೆಯೇನಲ್ಲ. ಆದರೆ ಎಲ್ಲ ರೋಗಗಳನ್ನು ತನ್ನೊಳಗಿನ ನಿರೋಧಕ ಶಕ್ತಿಯಿಂದಲೇ ಸಹಿಸಿಕೊಂಡು ಬೆಳೆಯುತ್ತಿದ್ದ 'ಚಂದನವನ' ಈಗ ಕೃಶವಾಗಿದೆ. ಕೊರೊನಾ ಎಂಬ ವೈರಸ್ ಕೊಟ್ಟಿರುವ ಪೆಟ್ಟಿಗೆ ತತ್ತರಿಸಿದೆ. ಹಲವು ಕಾಲದಿಂದ ಚಿತ್ರರಂಗದ ಒಳಗೊಳಗೇ ಬೆಳೆಯುತ್ತಿರುವ ಹಲಬಗೆಯ ಉಳಿದ ರೋಗಗಳೂ ಉಲ್ಬಣಗೊಳ್ಳುವ ಎಲ್ಲ ಸೂಚನೆಗಳು ಕಾಣಿಸುತ್ತಿವೆ. ತುಸು ಆತಂಕದಿಂದಲೇ ಆರಂಭಗೊಂಡ 2021ನೇ ವರ್ಷ ಅದೇ ದುಗುಡದೊಂದಿಗೆ ಕೊನೆಗೊಳ್ಳುತ್ತಿದೆ. ಈ ವರ್ಷದ ಒಟ್ಟಾರೆ ನಡಿಗೆಯ ಒಂದು ಪಕ್ಷಿನೋಟ ಇಲ್ಲಿದೆ.